ಇಂಗ್ಲೀಷ್‌ನಲ್ಲಿ ೩೯ ಹಳ್ಳಿಗಳಲ್ಲಿ ತೋಡಲಾದ ಬಾವಿಗಳಲ್ಲಿ ೩೬ ಬಾವಿಗಳು ಯಶಸ್ವಿಯಾಗಿವೆ ಎಂಬುದಾ ತಿಳಿಸಿದ್ದೀರಿ. ಇದರಲ್ಲಿ ಯಾವುದು ತಪ್ಪು ಎಂಬುದಾಗಿ ದಯಮಾಡಿ ತಿಳಿಸಿ.

ಶ್ರೀ ಕೆ. ಪ್ರಭಾಕರ್.—ಇಂಗ್ಲೀಷಿನಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶ ನಿಜ ಎಂಬುದಾಗಿ ತಿಳಿಸುತ್ತಿದ್ದೇನೆ. ಜನಸಂಖ್ಯೆಯ ಆಧಾರದ ಮೇಲೆ ಕೊಳವೆ ಬಾವಿಗಳನ್ನು ತೆಗೆಯುತ್ತಿಲ್ಲ. ಒಂದು ಊರಿಗೆ ಒಂದು ಬಾವಿ ಇರಬೇಕೆಂಬ ಆಧಾರದ ಮೇಲೆ ಬಾವಿಗಳನ್ನು ತೋಡಿಸುತ್ತಿದ್ದೇವೆ. ಜನಸಂಖ್ಯೆ ಇನ್ನೂ ಹೆಚ್ಚಿಗೆ ಇದ್ದು ಇನ್ನೊಂದು ಬಾವಿ ಬೇಕೆಂದರೆ ಎರಡನೇ ಸುತ್ತಿನಲ್ಲಿ ತೆಗೆಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ ಸಿದ್ದಮಾದಯ್ಯ.—ನಮ್ಮ ತಾಲ್ಲೂಕು ಹಳ್ಳಿಗಳೇ ಜಾಸ್ತಿ ಇರತಕ್ಕಂತಹ ತಾಲ್ಲೂಕು. ನಮ್ಮ ಕಡೆ ಕೆಲವು ದೊಡ್ಡಿಗಳು ಎಂಬುದಾಗಿ ಇವೆ ಆ ರೀತಿಯ ದೊಡ್ಡಿಗಳಲ್ಲಿ ಸುಮಾರು ೨೦ ಒಕ್ಕಲು ೩೦ ಒಕ್ಕಲು, ೪೦ ಒಕ್ಕಲುಗಳು ಇರತಕ್ಕಂತಹ ಹಳ್ಳಿಗಳು ಇವೆ. ಆ ಹಳ್ಳಿಗಳಲ್ಲಿರತಕ್ಕಂತಹವರಲ್ಲಿ ಬಹುಪಾಲು ಗಿರಿಜನರೇ ಜಾಸ್ತಿ ಇದ್ದಾರೆ. ಅವರಿಗೆ ಕುಡಿಯುವ ನೀರನ್ನು ಒದಗಿಸಿಕೊಡುವುದಕ್ಕೆ ಆಗದಿದ್ದ ಮೇಲೆ ಸರ್ಕಾರ ಏನು ಕೆಲಸ ಮಾಡುತ್ತದೆ ಎಂಬುದಾಗಿ ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವ ಸನ್ನಿವೇಶ ಇದೆ. ಆದ್ದರಿಂದ ಅಂತಹ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ? ಹಣ ಮಾತ್ರ ಜಾಸ್ತಿ ಖರ್ಚಾಗಿದೆ ಆ ಹಳ್ಳಿಯ ಜನರು ಕುಡಿಯುವ ನೀರನ್ನು ತೆಗೆದುಕೊಂಡು ಬರಬೇಕಾದರೆ, ಹಳ್ಳಿ–ಕೊಳ್ಳಿಗಳಲ್ಲಿ ಸುಮಾರು ಒಂದು ಮೈಲಿ ದೂರದಿಂದ ಕುಡಿಯುವ ನೀರನ್ನು ಹೊತ್ತುಕೊಂಡು ಬರತಕ್ಕಂತಹ ಪ್ರಸಂಗ ಇದೆ.

೯ – ೩೦ ಎ. ಎಂ.

ಶ್ರೀ ಕೆ. ಪ್ರಭಾಕರ್.— ಚಿಕ್ಕ ಚಿಕ್ಕ ಗ್ರಾಮಗಳು ಅಂತಾಗಲಿ ಅಥವಾ ಚಿಕ್ಕ ಚಿಕ್ಕ ಹಳ್ಳಿಗಳು ಅಂತಾಗಲಿ ಯಾವ ತಾರತಮ್ಯವೂ ನಮಗೆ ಇಲ್ಲಾ ಯಾವ ಕೆಲಸವನ್ನೇ ಮಾಡಲಿ ಒಂದಕ್ಕೊಂದು ವ್ಯತ್ಯಾಸಮಾಡಿ ಕೆಲವು ಹಳ್ಳಿಗಳನ್ನು ಸೇರಿಸುವುದು ಕೆಲವು ಹಳ್ಳಿಗಳನ್ನು ಬಿಟ್ಟು ಬಿಡುವುದು ಆ ರೀತಿ ಮಾಡುವುದು ಇಲ್ಲಾ ಆದರೆ ಇದರಲ್ಲಿ ಏನಾಗುತ್ತದೆ ಎಂದರೆ ಹೌಸಿಂಗ್ ಕಾಲೋನಿ ಬಗ್ಗೆ ಸರ್ವೇ ಮಾಡುವಾಗ ಆ ಭೂಮಿಯನ್ನು ಸರ್ವೆ ಮಾಡಿರುವುದಿಲ್ಲಾ. ಹೊಸ ವರ್ಷ ಹುಟ್ಟಿದಾಗ ಅಂಥಾ ಭೂಮಿಯನ್ನು ಸೇರಿಸುತ್ತೇನೆ. ಈ ಬಗ್ಗೆ ಯಾವುದಾದರೂ ಬಿಟ್ಟಿದ್ದರೆ ಅದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಇದು ಚಿಕ್ಕ ಹಳ್ಳಿ ಅನ್ನುವುದಾಗಲಿ ಅಥವಾ ಒಡವರು ಇದ್ದಾರೆ ಅನ್ನುವುದಾಗಲಿ ಆ ಬಗ್ಗೆ ಯಾವ ತಾರತಮ್ಯವೂ ಇಲ್ಲಾ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲರಿಗೂ ಕೂಡ ನೀರನ್ನು ಒದಗಿಸಿಕೊಡಬೇಕೆನ್ನುವುದೇ ನಮ್ಮ ನಿಯಮವಾಗಿದೆ ಅದರಂತೆ ಏರ್ಪಾಡು ಮಾಡುತ್ತೇವೆ.

angalore City Corporation Market Complex at Jayanagar Bangalore

767. Sri T. R. Shamanna (Basavanagudi).—Will the Minister for Municipal Administration be pleased to state.—

(a) what was the orginal estimate for the construction of the B. C. Corporation Market Complex at Jayanagar, Bangalore-11 ;

(b) what is the final cost for completing the works of the above market complex.

(c) what is the demand collection and balance of the revenue of the above market for 1977-78 and what is the total outstanding as on 31st December 1978.

(d) what is the balance due for the Lease of the Cinema portion in the complex,

(e) what are the steps taken to recover the amount due by Lessee of the Cinema ?

SRI H.C. SRIKANTHAIAH. (Minister for Municipal Administration)–

a) 56 lakhs.

b) 254 lakhs

c) —

Demand	Collection	Balance
1977–78 ; 22,11,732–60	16,26,750	5,84 982–60
Upto 31st December 1978 ; 19,82,135–60	11,89,739 30	7,92 360–30

(d) The balance due from the Ex–Lessee of Cinema at J. S. C. is Rs. 1,20,500-towards rent Rs. 50,682–98 towards electricity charges and Rs. 5,299 64ps towards water charges. In all a sum of Rs. 191,582 62 ps. including damages.

(e) Steps are being takep to recover the amount due by the Ex-Lessee by referring the matter to the Deputy Commissioner. Bangalore District for recovery of the balance as arrears of land revenue.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ. ಈ ಜಯನಗರದ ಮಾರ್ಕೆಟ್ ಪ್ರಾರಂಭವಾಗುವಾಗ ಅದರ ಎಸ್ಟಿಮೇಟ್ ೫೬ ಲಕ್ಷ ಇತ್ತು. ಕೊನೆಗೆ ಅದನ್ನು ಪೂರ್ತಿಗೊಳಿಸಿದಾಗ್ಗೆ ಅದು ಖರ್ಚು ೨೫೪ ಲಕ್ಷ ಆಗಿದೆ ಇಷ್ಟು ಹೆಚ್ಚು ಮೊತ್ತ ಖರ್ಚಾಗುವುದಕ್ಕೆ ಕಾರಣ ಏನು. ಇನ್ನು ಎರಡನೆಯದಾಗಿ ಇದರಿಂದ ಬಾಡಿಗೆಬರಬೇಕಾದ್ದು ೧೧ ಲಕ್ಷ ರೂಪಾಯಿ ಇದ್ದುದ್ದು ೧೩ ಲಕ್ಷಕ್ಕೆ ಏರಿರುವುದಕ್ಕೆ ಕಾರಣ ಏನು ?

† ಶ್ರೀ ಹೆಚ್. ಸಿ. ಶ್ರೀ ಕಂಠಯ್ಯ.—ಮೊದಲನೆಯದಾಗಿ ಹೇಳುವುದಾದರೆ ೧೪ನೇ ಡಿಸೆಂಬರ್ ೧೯೭೦ ರಲ್ಲಿ ಇದರ ಒಂದು ಎಸ್ಟಿಮೇಟ್ ೫೬ ಲಕ್ಷಕ್ಕೆ ಮಂಜೂರು ಆಯಿತು ಆಮೇಲೆ ಇದು ಮಂಜೂರು ಆಗುವಾಗ ಎರಡು ಸಾರಿ ಟೆಂಡರ್ ಬಂತು. ಆ ಎರಡೂ ಟೆಂಡರ್ಸ್ ಕೂಡ ಮೇಲಿನ ಒಂದು ಎಸ್ಟಿಮೇಟಿನ ೮೨ ಪರ್ಸೆಂಟ್ ಜಾಸ್ತಿ ಇತ್ತು ಆ ಎರಡೂ ಟೆಂಡರ್ ಪ್ರಕಾರ ಇದು ಸ್ಯಾಂಕ್ಷನ್ ಆಯಿತು. ತದನಂತರ ೧೯೭೨-೭೩ ರಲ್ಲಿ ಇನ್ನೊಂದು ಟೆಂಡರ್ ೩೨ ಪರ್ಸೆಂಟ್‌ಗೆ ಬಂತು. ಇದು ಕಡಿಮೆ ಇದ್ದುದರಿಂದ ಈ ಕೆಲಸವನ್ನು ಮೈಸೂರು ಕನ್‌ಸ್ಟ್ರಕ್ಷನ್ ಕಂಪನಿಗೆ ಕೊಟ್ಟಿದೆ. ಇನ್ನು ಆದಾದಮೇಲೆ ಆಡಿಟೋರಿಯಮ್ ಮತ್ತು ಇತರ ವ್ಯವಸ್ಥೆಗಳು ಆಡಿಷನಲ್ ಆಗಿ ಮಾಡಬೇಕು ಅಂತ ಬಂತು ಏತಕ್ಕೆಂದರೆ ಜಯನಗರದ ಏರಿಯಾದಲ್ಲಿರುವ ನಿವಾಸಿಗಳಿಗೆ ಈ ತರಹವಾಗಿ ಯಾವುದೂ ಅನುಕೂಲಗಳು ಇಲ್ಲದೇ ಇರುವುದರಿಂದ ಅದನ್ನು ಮಾಡಿಕೊಡುವುದಕ್ಕಾಗಿ ಮತ್ತೊಂದು ಎಸ್ಟಿಮೇಟ್ ಬಂತು ಈ ಒಂದು ಆಡಿಷನಲ್ ಐಟಂಸ್ ಗಾಗಿ ೮೩ ಲಕ್ಷ ೫೩ ಸಾವಿರದ ೩೫೫ ರೂಪಾಯಿ ಖರ್ಚು ಬಂತು ಅಲ್ಲಿಗೆ ಒಟ್ಟು ೧ ಕೋಟಿ ೧೦ ಲಕ್ಷ ರೂಪಾಯಿ ಕೆಲಸವನ್ನು ಈ ಮೈಸೂರು ಕನ್‌ಸ್ಟ್ರಕ್ಷನ್ ಕಂಪನಿಗೆ ಕೊಟ್ಟಿತು ಅನಂತರ ಅದಾದ ಮೇಲೆ ಇತರೇ ಕೆಲಸಕ್ಕೆ ೧೧೦ ಲಕ್ಷ ರೂಪಾಯಿ ಟೆಂಡರ್ ಒಂದು ಬಂತು ಇವೆಲ್ಲಾ ನಾನು ಹೇಳುತ್ತಾ ಇರುವುದು ಬರೇ ಸಿವಿಲ್ ವರ್ಕ್ಸ್‌ಗೆ ಮಾತ್ರ, ಇನ್ನು ಉಳಿದಂಥಾ ವರ್ಕ್ಸ್ ಏನು ಇದೆ ಅಂದರೆ ವಾಟರ್‌ಸಪ್ಲೈ ಸ್ಯಾನಿಟರಿ ವರ್ಕ್ಸ್ ಲಿಫ್ಟ್ ಪ್ರಾಜೆಕ್ಟರ್ಸ್ ಮುಂತಾದ ವ್ಯವಸ್ಥೆಗಾಗಿ ಇನ್ನೂ ೫೫ ಲಕ್ಷ ರೂಪಾಯಿ ಜಾಸ್ತಿ ಖರ್ಚಾಗಿದೆ ; ಒಟ್ಟಿನಲ್ಲಿ ಈ ಕೆಲಸಕ್ಕಾಗಿ ಹೆಚ್ಚಾಗಿ ೧೬೫ ಲಕ್ಷ ರೂಪಾಯಿ ಖರ್ಚಾಗಿದೆ. ಇದನ್ನೆಲ್ಲಾ ಎಕ್ಸಿಕ್ಯೂಷನ್ ಮಾಡುವಾಗ ಒಟ್ಟು ಇದಕ್ಕಾಗಿ ೨೫೪ ಲಕ್ಷ ರೂಪಾಯಿ ಖರ್ಚಾಗಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯಸದಸ್ಯರಿಗೆ ಹೇಳಬೇಕಾದರೆ ಅವರು ಯಾರಿಗೂ ಬೇಕಾದ ವರಲ್ಲಾ. ಅವರು ಸಾಹೆಬರು ಅವರು ನಮಗೂ ಸಂಬಂಧವಿಲ್ಲಾ ನಿಮಗೂ ಸಂಬಂಧವಿಲ್ಲಾ ಮಾನ್ಯ ಮುಖ್ಯಮಂತ್ರಿಗಳಿಗೂ ಸಂಬಂಧವಿಲ್ಲಾ ತಮಗೆ ಹೇಳಬೇಕಾದರೆ, ಈ ವಿಚಾರ ತಮಗೂ ಗೊತ್ತಿದೆ. ಟೆಂಡರ್ ಕರೆಯುವಾಗ ಹೈಯ್ಯೆಸ್ಟ್ ಟೆಂಡರ್‌ಗೆ ಹಾಕಿಬಿಡುತ್ತಾರೆ ಅನಂತರ ಅವರು ಸರಿಯಾಗಿ ಕಂತು ಗಳನ್ನು ಕಟ್ಟದೆ ಬಾಕಿ ಉಳಿಸಿಕೊಳ್ಳುವ ಕಥೆ ತಮಗೆ ಗೊತ್ತಿದೆಯಿಲ್ಲ. ತಮಗೆ ಹೇಳಬೇಕಾದರೆ ಈ ಸಿನಿಮಾ ಥಿಯೇಟರ್ ಬಾಡಿಗೆಯನ್ನು ೪೨ ಸಾವಿರ ರೂಪಾಯಿಗೆ ಮಾಡಿಕೊಂಡಿದ್ದರು. ಈ ಒಂದು ಹೆಚ್ಚಿನ ಬಾಡಿಗೆ ವೇಜಸ್ಟಿಕ್‌ನಲ್ಲಿರುವ ಸಿನಿಮಾ ಮಂದಿರಗಳಲ್ಲಾಗಲಿ ಅಥವಾ ಇನ್ನು ಇತರೇ ಕಡೆಗಳಲ್ಲಿರುವ ಸಿನೆಮಾ ಮಂದಿರಗಳಲ್ಲೀ ಆಗಲಿ ಇಲ್ಲಾ. ಹೀಗೆ ಹೈಯಸ್ಟ್ ರೆಂಟಿಗೆ ಹಾಕಿಬಿಟ್ಟು ನಂತರ ಬಾಕಿ ಉಳಿಸಿಕೊಳ್ಳುತ್ತಾರೆ ಇದರಿಂದ ಇಷ್ಟು ಲಾಸ್ ಆಗಿದೆ. ಈ ಒಂದು ಪರಿಸ್ಥಿತಿಯಿಂದ ಅವರ ಮೇಲೆ ೧ ಲಕ್ಷ ೯೧ ಸಾವಿರ ಚಿಲ್ಲರೆ ರೂಪಾಯಿ ಬಾಕಿ ನಿಂತಿದೆ ಇಷ್ಟು ಬಾಕಿ ನಿಂತಿದ್ದರಿಂದ ಕಾರ್ಪೋರೇಷನ್ನವರು ಹೋಗಿ ಬಾಗಿಲನ್ನು ಮುಚ್ಚಿಸಿದರು. ಇನ್ನು ಈ ಬಗ್ಗೆ ಬಾಕಿ ಬರಬೇಕಾಗಿರುವ ಮೊಬಲಗಳನ್ನು ಲ್ಯಾಂಡ್ ಆರಿಯರ್ಸ್ ಮುಖಾಂತರ ವಸೂಲ್ಮಾಡು ವುದಕ್ಕೆ ಡೆಪ್ಯೂಟಿ ಕಮೀಷನ್ನರ್‌ರವರು ಕ್ರಮಗಳನ್ನು ತೆಗೆದುಕೊಂಡಿ ದ್ದಾರೆ. ಇಷ್ಟೇ ಅಲ್ಲದೆ ಸುಮಾರು ೨ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವಂಥಾ ಪ್ರೊಜೆಕ್ಟರ್ಸ್ ಅನ್ನು ಅವರಿಂದ ಸೀಜ್‌ಮಾಡಿ ಇಟ್ಟಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಮುಖ್ಯವಾಗಿ ಹೇಳುವುದಾದರೆ ಈ ಸಿನಿಮಾ ಥಿಯೇಟರ್ ಜೊತೆ ಗೇನೇ ಮೀಟರನ್ನು ಹಾಕಿಬಿಟ್ಟಿದ್ದೀರಿ. ಆದುದರಿಂದ ಈ ಬಗ್ಗೆ ಲೈಟ್ ಛಾರ್ಜ್ ವಾಟರ್ ಛಾರ್ಜ್ ನೀವೇ ಕಟ್ಟುವ ಪರಿಸ್ಥಿತಿ ಬಂತು. ನೀವೇನಾದರೂ ಪ್ರತ್ಯೇಕ್ಷವಾಗಿ ಮೀಟರ್ ಹಾಕಿದ್ದರೆ ಇದನ್ನು ಕಾರ್ಪೋರೇಷನ್ ನವರು ಕಟ್ಟುತ್ತಿರಲಿಲ್ಲ, ಅವರು ಕಟ್ಟದೇ ಹೋಗಿದ್ದರೆ ಬಂದು ಕಟ್ ಮಾಡುವರು ಆವಾಗ ಸರಿಹೋಗು ವುದು ಈಗ ಜೊತೆಗೇನೇ ಮಿಟರ್ ಹಾಕಿದ್ದುದರಿಂದ ಒಟ್ಟಿಗೆ ಇಷ್ಟು ಮೊತ್ತದ ಮೊಬಲಗು ಬಾಕಿ ನಿಲ್ಲುವುದಕ್ಕೆ ಕಾರಣವಾಯಿತು. ಈ ಬಗ್ಗೆ ಸರಿಯುವ ರೀತಿಯಲ್ಲಿ ವ್ಯವಸ್ಥೆ ಮಾಡಲಿಲ್ಲಾ ಇದನ್ನು ರೆನ್ಯೂವರೇಟೀವ್ ಎಂಟರ್‌ಪ್ರೈಸಸ್ ತರಹ ಮಾಡಿದರೆ ಅನೇಕರಿಗೆ ಅನುಕೂಲ ವಾಗುತ್ತದೆ ಆದುದರಿಂದ ಇದರ ಬಗ್ಗೆ ಸರಿಯಾದ ಕಾರ್ಯಕ್ರಮತೆಗೆದುಕೊಂಡು ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಜಯನಗರ ಕಾಂಪ್ಲೆಕ್ಸ್ ಅನ್ನು ಬಹಳ ಚೆನ್ನಾಗಿ ಕಟ್ಟಿದ್ದಾರೆ. ಈಗೊತ್ತು ನಮ್ಮಲ್ಲಿ ಆ ತರಹವಾದ ಕಾಂಪ್ಲೆಕ್ಸ್ ಎಲ್ಲೂ ಇಲ್ಲಾ ವಿದೇಶದಲ್ಲಿರುವ ಹಾಗೆ ಆ ಕಾಂಪ್ಲೆಕ್ಸ್ ಅನ್ನು ಚೆನ್ನಾಗಿ ಕಟ್ಟಿದ್ದಾರೆ. ಮತ್ತು ಆ ಕಾಂಪ್ಲೆಕ್ಸ್‌ನಲ್ಲಿರುವ ಥಿಯೇಟರ್ ಸಹ ಬಹಳ ಚೆನ್ನಾಗಿದೆ ಅಲ್ಲಿರತಕ್ಕಂಥವೆ ಜೆಟಿಬಲ್ ಮಾರ್ಕೆಟ್ ಬಹಳ ಚೆನ್ನಾಗಿದೆ· ಆ ಜಯನಗರದ ನಿವಾಸಿಗಳಿಗೆವ ಸಿಟಿ ಮಾರ್ಕೆಟ್

ಶ್ರೀ ಟಿ. ಆರ್. ಶಾಮಣ್ಣ.—ಇದರಲ್ಲಿ ಯದ್ಧಾತದ್ಧಾ ಆಗಿ ಖರ್ಚು ಮಾಡಿದ್ದೀರಲ್ಲಾ ಅದು ಅಧಿ ಕಾರಿಗಳ ಅಧಕ್ಷತೆಯಿಂದಲೋ ಅಥವಾ ನರ್ಲಕ್ಷತೆಯಿಂದಲೆಂದು ಮತ್ತೇನು ಕಾರಣ ಅನ್ನುವುದನ್ನು ತಿಳಿಸುತ್ತೀರಾ ? ಮತ್ತು ಇಷ್ಟು ಪೆಚ್ಚಿನ ಮೊತ್ತದ ಬಾಡಿಗೆ ಉಳಿಯುವುದಕ್ಕೆ ಕಾರಣ ಏನು ಅನ್ನುವ ದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗ ಸಿನಿಮಾ ಥಿಯೇಟರ್ ಬಾಕಿ ೧ ಲಕ್ಷ ೯೧ ಸಾವಿರ ರೂಪಾಯಿ ಚಿಲ್ಲರೇ ಬರಬೇಕಾಗಿದೆ. ಇದಕ್ಕೆ ಕಾರಣ ಏನು ಅನ್ನುವುದನ್ನು ತಮಗೆ ಬೇರೆ ಹೇಳಬೇಕಾಗಿಲ್ಲ. ತಮಗೇ ಗೊತ್ತಿದೆ. ಸಾಮಾನ್ಯವಾಗಿ ಅಂಗಡಿಗಳಿಗೆ ಮತ್ತು ಸಿನಿಮಾಗಳಿಗೆ ಟೆಂಡರ್ ಕರೆಯುವಾಗ ಸಿಕ್ಕಾಪಟ್ಟೆಯಾಗಿ ಹೈಯ್ಯೆಸ್ಟ್ ಟೆಂಡರ್ ಕೊಟ್ಟು ಬಿಡುತ್ತಾರೆ. ಅನಂತರ ತಿಂಗಳು ತಿಂಗಳಿಗೆ ಸರಿಯಾಗಿ ಕಂತನ್ನು ಕಟ್ಟದೆ ಈ ರೀತಿ ಬಾಕಿ ಉಳಿಸಿಕೊಳ್ಳುತ್ತಾರೆ. ಆದುದರಿಂದ ಇಷ್ಟು ಬಾಕಿ ನಿಂತಿದೆ.

ಶ್ರೀ ಟಿ. ಆರ್. ಶಾಮಣ್ಣ. ಈಗ ಸಿನಿಮಾ ಬಾಕಿ ಬಾಬ್ತು ಇಷ್ಟೊಂದು ಮೊತ್ತವನ್ನು ಅವರು ಕೊಡಬೇಕಾಗಿದೆ. ಈಗ ಆ ಮೊಬಲಗು ವಸೂಲಾಗದೇ ಇರುವುದಕ್ಕೆ ಕಾರಣ ಅವರು ಮುಖ್ಯಮಂತ್ರಿಗಳಿಗೆ ಬೇಕಾದವರು ಎಂದು ಹೇಳುತ್ತಾರೆ. ಅಲ್ಲದೇ ಈ ಬಗ್ಗೆ ಅಧಿಕಾರಿಗಳ ಮೇಲಾಗಲಿ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲಾ. ಅದಕ್ಕೆ ನಾನು ಹೇಳುವುದು ಏನೆಂದರೆ ಇದಕ್ಕೆ ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ತಕ್ಕ ಶಿಕ್ಷೆ ಕೊಡಿ ಮತ್ತು ಇದರ ಮೇಲೆ ಸರ್‌ಚಾರ್ಜ್ ಹಾಕಿ ಅವರಿಂದ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಆಗಲಿ ಅಥವಾ ಇನ್ನು ಇತರೇ ಮಾರ್ಕೆಟ್‌ಗಳಲ್ಲಿ ಬಹಳ ದೂರ ಇರುವುದರಿಂದ ಇದನ್ನು ಅಲ್ಲಿ ಕಟ್ಟ ಬೇಕಾಯಿತು. ಇದರಿಂದ ಅವರಿಗೆ ಬಹಳ ಅನುಕೂಲವಾಗಿದೆ ಆದರೆ ಅದನ್ನು ಚೆನ್ನಾಗಿ ಕಟ್ಟಿದ್ದಾರೆ ಎಂದು ಹೇಳುತ್ತೇನೆ. ಮತ್ತು ಅದನ್ನು ಕಟ್ಟುವುದಕ್ಕೆ ಹಣ ಜಾಸ್ತಿಯಾಗಿ ಖರ್ಚಾಗಿದೆ. ಒಟ್ಟಿನಲ್ಲಿ ಈ ಅರಿಯರ್ಸ್ ಅನ್ನು ವಸೂಲ್ಮಾಡುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ ಮತ್ತು ಅದನ್ನು ಯಾವ ರೀತಿ ರೆವ್ಮನರೇಟೀವ್ ಎಂಟರ್‌ಪ್ರೈಸ್ ಮಾಡಬೇಕೋ ಆ ರೀತಿ ಅದನ್ನು ಮಾಡುತ್ತೇನೆ.

Government Servants in the State

834. SRI P. ANANDA KUNDA HEGDE (Bhramhavara).—Will the Minister for Finance be pleased to state :—

(a) the total number of Government employees working in various departments of Government in all the cadres in the State:

(b) the total amount spent in respect of these employees and directly and indirectly?

SRI S. M. YAHYA (Minister for Finance).—

(a) 3.63 lakhs.

(b) Nearly an amount of Rs. 219.29 crores per year.

ಶ್ರೀ ಪಿ. ಆನಂದಕುಂದ ಹೆಗಡೆ.—ಅಧ್ಯಕ್ಷರೇ ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಸುಮಾರು ವರ್ಷಕ್ಕೆ ೨೧೯.೨೯ ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ನಮ್ಮ ರಾಜ್ಯದ ೪೦೦ ಕೋಟಿ ರೂಪಾಯಿ ಆದಾಯದಲ್ಲಿ ಶೇಕಡ ೫೦ ಭಾಗಕ್ಕಿಂತ ಹೆಚ್ಚು ಹಣ ಈ ಆಡಳಿತ ನಿರ್ವಹಣೆಗೆ ವೆಚ್ಚವಾಗುತ್ತಾ ಇದೆ. ಇದರಿಂದ ಏನಾಗಿದೆ ಎಂದರೆ ನಮ್ಮ ಕರ್ನಾಟಕದ ನೆಲೆಯಲ್ಲಿರುವ ಭಾಗಗಳಿಗೆ ಅಭಿವೃದ್ಧಿಗಾಗಿ ಏನು ಬಂಡವಾಳ ತೊಡಗಿಸಬೇಕೋ ಅದಕ್ಕೆ ಹಣ ಕಡಿಮೆಯಾಗುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಆಡಾಳಿತಾತ್ಮಕ ದೃಷ್ಟಿಯಿಂದ ಈ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೇ ಮತ್ತು ಆರ್ಥಿಕವಾಗಿ ಈ ಒಂದು ರಾಜ್ಯದ ಆದಾಯದಲ್ಲಿ ಈ ಆಡಳಿತಾತ್ಮಕವಾದ ವೆಚ್ಚವನ್ನು ಕಡಿಮೆ ಮಾಡುವುದಕ್ಕೋಸ್ಕರ ಏನಾದರೂ ಒಂದು ಸೂತ್ರವನ್ನು ಹಾಕಿಕೊಂಡಿದ್ದೀರಾ ?

† ಶ್ರೀ ಎಸ್. ಎಂ. ಯಾಹ್ಯಾ.—ಸರ್ಕಾರೀ ನೌಕರರಿಗೆ ಹಣವನ್ನು ಖರ್ಚು ಮಾಡಬೇಕಾಗುವುದನ್ನು ಅವಾಯಿಡ್ ಮಾಡುವುದಕ್ಕಾಗುವುದಿಲ್ಲಾ. ಮಾನ್ಯ ಸದಸ್ಯರು ಶೇಕಡ ೫೦ ರಷ್ಟು ಹಣವನ್ನು ಇವರಿಗೆ ಖರ್ಚು ಮಾಡುತ್ತಿದ್ದಾರೆ ಎಂತ ಏನು ಹೇಳಿದರೋ ಅದು ಸರಿಯೆಲ್ಲ ಎಂದು ಹೇಳುತ್ತೇನೆ. ಇವರಿಗೆ ಖರ್ಚಾಗತಕ್ಕಂಥಾದ್ದು ಶೇಕಡ ೩೨ ರಷ್ಟು ಮಾತ್ರ. ಪ್ಲಾನ್‌ನಲ್ಲಿ ಖರ್ಚು ಮಾಡುವ ಹಣ ಅಭಿವೃದ್ಧಿಗಾಗಿ ಹೋಗುತ್ತದೆ. ನಾನ್‌ಪ್ಲಾನ್‌ನಲ್ಲಿ ಹೂಡಿದ ಹಣ ಈ ಸರ್ಕಾರೀ ನೌಕರರಿಗೆ ಖರ್ಚು ಮಾಡಬೇಕಾಗಿದೆ. ಆದುದರಿಂದ ಸರ್ಕಾರದ ಪ್ರೋಗ್ರಾಂನಂತೆ ಒಂದು ವ್ಯವಸಾಯದ ಅಭಿವೃದ್ಧಿಯಾಗಲೀ ಯಾವುದೇ ಒಂದು ಅಭಿವೃದ್ಧಿ ಕಾರ್ಯ ಆಗಲಿ ಅದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಸರ್ಕಾರೀ ನೌಕರರುಗಳು ಬಹಳ ಅಗತ್ಯ ಇದೆ. ಅದಕ್ಕಾಗಿ ನಾವು ಅವರಿಗೆ ಹಣ ಖರ್ಚು ಮಾಡುತ್ತೇವೆ. ಇತರೇ ರಾಜ್ಯಗಳೊಂದಿಗೆ ನಮ್ಮ ಕರ್ನಾಟಕವನ್ನು ಹೋಲಿಸಿ ನೋಡಿದರೆ ನಾವು ಅವರಿಗೆ ಸ್ವಲ್ಪ ಕಡಿಮೆಯಾಗಿ ಉತ್ತಮ ರೀತಿಯಲ್ಲಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಬೇಕಾಗಿದೆ.

ಶ್ರೀ ಪಿ. ಆನಂದಕುಂದ ಹೆಗಡೆ.—ರಾಜ್ಯದಲ್ಲಿ ರಜಾದಿವಸಗಳನ್ನು ಕಡಿಮೆ ಮಾಡುವ ಸಾಧ್ಯತೆ ಇದೆಯೇ ಮತ್ತು ಕೆಲಸದ ಅವಧಿಯನ್ನು ಹೆಚ್ಚು ಮಾಡುವ ಸಾಧ್ಯತೆ ಇದೆಯೇ ಎಂದು ನಾನು ಕೇಳ ಬಯಸುತ್ತೇನೆ. ನೌಕರರ ಸಂಖ್ಯೆಯ ಹೆಚ್ಚು ಮಾಡಿರುವುದಕ್ಕೆ ಏನಾದರೂ ಸೂತ್ರಗಳು ಇವೆಯೇ ?